Ref.No.52/2022

WW-1,

**<u>ದಿನಾಂಕಃ 25.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ- 2 ನೇ ಪಾರ್ಟಿ ಪರವಾಗಿಃ ಶ್ರೀ.VKS ವಕೀಲರಿಂದ</u>**

ದಿಃ31.05.2016 ರಂದು ವಾಹನ ಸಂಖ್ಯೆ ಎಫ್-22-0024 ರಲ್ಲಿ ನಿರ್ವಾಹಕರಾಗಿ, ಮಾರ್ಗಸೂಚಿ 22/23 ರಲ್ಲಿ ಕೆಲಸ ಮಾಡುತ್ತಿದ್ದಿರಿ ಎಂದರೆ ಸರಿ. ಆ ಕಾಲಕ್ಕೆ ಕರಿಂಗಾಣ ಎಂಬ ಸ್ಥಳದಲ್ಲಿ ಮೇಲಾಧಿಕಾರಿಗಳು ತನಿಖೆಯನ್ನು ಮಾಡಿ ಜ್ಞಾಪನಪತ್ರವನ್ನು ನೀಡಿರುತ್ತಾರೆ ಎಂದರೆ ಸರಿ. ಮೇಲಾಧಿಕಾರಿಗಳು ಜ್ಞಾಪನಪತ್ರವನ್ನು ಇಬ್ಬರು ಪ್ರಯಾಣಿಕರಲ್ಲಿ ಒಬ್ಬ ಪ್ರಯಾಣಿಕನಿಗೆ, ಟಿಕೆಟ್ ನೀಡದೇ ಇದ್ದ ಕಾರಣಕ್ಕೆ ಕೊಟ್ಟಿದ್ದರು ಎಂದರೆ ಸರಿ, ಸಾಕ್ಷಿಯು ಮುಂದುವರಿದು ಬಸ್ಸಿನಲ್ಲಿ ಒಬ್ಬನೇ ಪ್ರಯಾಣಿಕನು ಇದ್ದು ಆತ ವಿದ್ಯಾರ್ಥಿಯಾಗಿದ್ದು, ಆತನ ಬಳಿ ಪಾಸ್ ಇತ್ತು, ಆದರೂ ಕೂಡ ಮೇಲಾಧಿಕಾರಿಗಳು ತಿರುಚಿ ಸುಳ್ಳು ನಮೂದು ಮಾಡಿ ಜ್ಞಾಪನ ಪತ್ರವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ನಿಎಂ-4 ರಲ್ಲಿರುವ ಸಹಿ ನನ್ನದಾಗಿರುತ್ತದೆ, ಆದರೆ ಅದರಲ್ಲಿರುವ ಬ್ಯಾಡ್ಜ್ ನಂಬರ್ ನನ್ನದಾಗಿರುವುದಿಲ್ಲ. ನಿಎಂ-5 ರಲ್ಲಿ ಸಹಿ ನನ್ನದಾಗಿರುವುದಿಲ್ಲ ಹಾಗೂ ಅದರಲ್ಲಿ ನಮೂದಾಗಿರುವ ಬ್ಯಾಡ್ಜ್ ನಂಬರ್ ನನ್ನದಾಗಿರುವುದಿಲ್ಲ. ನಿಎಂ-1 ರಲ್ಲಿರುವ ಸಹಿ ನನ್ನದಾಗಿರುತ್ತದೆ ಹಾಗೂ ಅದರಲ್ಲಿರುವ ಬ್ಯಾಡ್ಜ್ ನಂಬರ್ ನನ್ನದಾಗಿರುತ್ತದೆ. ಸಾಕ್ಷಿಯು ಮುಂದುವರೆದು ನಿಎಂ-1 ರಲ್ಲಿ ನನ್ನ ಸಹಿಯನ್ನು ಖಾಲಿ ಹಾಳೆಯ ಮೇಲೆ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಎಂ-1 ಕ್ಕೆ ಸಹಿಯನ್ನು ನಾನು ಮೇಲಾಧಿಕಾರಿಗಳು ತನಿಖೆಯ ನಡೆಸುವ ಸುವಯದಲ್ಲಿ ಹಾಕಿರುತ್ತೇನೆ ಎಂದರೆ ಸರಿ. ನಿಎಂ-4 ಕ್ಕೆ ನನ್ನ ಸಹಿಯನ್ನು ನಿಎಂ-1 ಕ್ಕೆ ಸಹಿಯನ್ನು ಹಾಕಿದ ಕಾಲಕ್ಕೆ ಹಾಕಿರುತ್ತೇನೆ ಎಂದರೆ ಸರಿ. ನಿಎಂ-5 ಯಲ್ಲಿರುವ ಸಹಿ ನನ್ನದಾಗಿದ್ದರೂ ಸಹ, ಅದು ನನ್ನದಾಗಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಎಂ-4 ಗೆ ನಾನು ಸಹಿ ಹಾಕುವಾಗ ಪ್ರಯಾಣಿಕರು ಕೂಡ ಸಹಿ ಹಾಕಿರುತ್ತಾರೆ ಎಂಬ ಸೂಚನೆಗೆ ಸಾಕ್ಷಿ ನನ್ನ ಕಣ್ಣ ಮುಂದೆ ಹಾಕಿರುವುದಿಲ್ಲ ಎಂದು ನುಡಿಯುತ್ತಾರೆ. ನಿಎಂ-4 ಗೆ ನಾನು ಸಹಿ ಹಾಕುವಾಗ ಪ್ರಯಾಣಿಕರು ಕೂಡ ಸಹಿ ಹಾಕಿದ್ದರು ಸಹ, ನನ್ನ ಕಣ್ಣ ಮುಂದೆ ಹಾಕಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

Ref.No.52/2022

WW-1,

ವಿಚಾರಣೆಯ ಕಾಲಕ್ಕೆ ನಾನು ತನಿಖಾಧಿಕಾರಿಗಳ ಮುಂದೆ, ನನ್ನ ಯಾವುದೇ ಸಾಕ್ಷಿ ವಿಚಾರಣೆ ಇರುವುದಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿ. ಸಾಕ್ಷಿದಾರರಿಗೆ ಹಿಸ್ಟರಿ ಶೀಟನ್ನು ತೋರಿಸಿ, ಪ್ರಸ್ತುತ ಪ್ರಕರಣವಲ್ಲದೇ ಈ ಹಿಂದೆ ನನ್ನ ಮೇಲೆ 2010 ರಿಂದ 2019 ರವರೆಗೆ 115 ಪ್ರಕರಣಗಳು ದಾಖಲಾಗಿವೆ ಎಂದರೆ ಸರಿ. ಸದರಿ ದಾಖಲೆಯನ್ನು ಈಗ ನಾನು ನೋಡುತ್ತಿದ್ದು, ಅದುನ್ನು ನಿಎಂ-27 ಎಂದು ಗುರುತಿಸಲಾಯಿತು. ನಿಎಂ-27 ರಲ್ಲಿ ತೋರಿಸಲಾದ ಪ್ರಕರಣಗಳಲ್ಲಿ ನನಗೆ ಶಿಕ್ಷೆ ಕೂಡ ವಿಧಿಸಲಾಗಿರುತ್ತದೆ ಎಂದರೆ, ಸಾಕ್ಷಿಯೂ ಎಲ್ಲಾ ಪ್ರಕರಣದಲ್ಲಿ ಶಿಕ್ಷಾದೇಶ ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

ದಿಃ 31/05/2016 ರಲ್ಲಿ ನಾನು ವಾಹನ ಸಂಖ್ಯೆ ಎಫ್-22-0024 ರಲ್ಲಿ ನಿರ್ವಾಹಕನಾಗಿ ಕರ್ತವ್ಯ ನಿರ್ವಹಿಸುತ್ತಿರ ಬೇಕಾದರೆ, ಸದರಿ ವಾಹನದಲ್ಲಿದ್ದ ಇಬ್ಬರು ಪ್ರಯಾಣಿಕರ ಪೈಕಿ, ಒಬ್ಬ ಪ್ರಯಾಣಿಕನಿಂದ ರೂ.9/- ಪಡೆದು ಟಿಕೆಟ್ ನೀಡದೇ, ಕರ್ತವ್ಯ ಲೋಪ ಮಾಡಿದ್ದರಿಂದ, ನಿಮ್ಮ ಮೇಲೆ ಮಾಡಿದ ಇಲಾಖಾ ತನಿಖಾದೇಶ ಸರಿಯಾಗಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು,
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.